ಸಂ. 4906
ದಿನಾಂಕ 04/12/18
MD KREDL

## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: M/s BVH Hydel Pvt. Ltd., ರವರಿಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಲ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ ಹಂಚಿಕೆಯಾಗಿರುವ 1 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯ ಹಂಚಿಕೆ ಆದೇಶವನ್ನು ರದ್ದುಗೊಳಿಸುವ ಕುರಿತು.

ಓದಲಾಗಿದೆ:
1. ಸರ್ಕಾರದ ಆದೇಶ ಸಂಖ್ಯೆ : ಇಎನ್ 67 ಎನ್‌ಸಿಇ 2015, ದಿ; 08.03.2016.
2. ಸರ್ಕಾರದ ಆದೇಶ ಸಂಖ್ಯೆ: ಇಎನ್ 68 ಎನ್‌ಸಿಇ 2017, ದಿನಾಂಕ: 09.03.2017.
3. ಸರ್ಕಾರದ ಪತ್ರ ಸಂಖ್ಯೆ: ಇಎನ್ 379 ಎನ್‌ಸಿಇ 2017, ದಿನಾಂಕ: 30.05.2018.
4. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ ಇವರ ಪತ್ರ ಸಂಖ್ಯೆ: ಕೆ.ಆರ್.ಇ.ಡಿ/07/ಎಸ್‌ಜಿ/ಎಫ್–213/2018/7198–99, ದಿನಾಂಕ: 30.10.2018.

* * *

**ಪ್ರಸ್ತಾವನೆ :-** 4/12

MD KREDL

ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಆದೇಶದ ಮೂಲಕ M/s BVH Hydel Pvt. Ltd., ಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಲ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ ಕೆಲವು ಷರತ್ತುಗಳಿಗೊಳಪಟ್ಟು 1 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕವನ್ನು ಸ್ಥಾಪಿಸಿ, ಸದರಿ ಘಟಕದಿಂದ ಉತ್ಪಾದನೆಯಾಗುವ ವಿದ್ಯುತ್ತನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ನಿರಾಕ್ಷೇಪಣೆಯನ್ನು ನೀಡಲಾಗಿತ್ತು.

ಸದರಿ ನಿರಾಕ್ಷೇಪಣಾ ಆದೇಶದಲ್ಲಿನ ಷರತ್ತುಗಳ ಪೈಕಿ ಕ್ರಮ ಸಂಖ್ಯೆ (2) ರ ಷರತ್ತಿನಂತೆ M/s BVH Hydel Pvt. Ltd., ರವರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸೌರ ನೀತಿ 2014–21 ರ ಪ್ರಕಾರ ಅನ್ವಯವಾಗುವ ಶುಲ್ಕ ಹಾಗೂ ಇತರ ಬ್ಯಾಂಕ್ ಖಾತರಿಯನ್ನು ಪಾವತಿಸಬೇಕಾಗಿತ್ತು. ಮೇಲೆ ಓದಲಾದ ಕ್ರಮ ಸಂಖ್ಯೆ (2) ರ ಆದೇಶದ ಮೂಲಕ ಖಾಸಗಿ ಸ್ವತಂತ್ರ ವಿದ್ಯುತ್ ಉತ್ಪಾದಕರ ವಿಭಾಗದಡಿ ಸ್ವಂತ ಉಪಯೋಗಕ್ಕಾಗಿ/ಮೂರನೇ ವ್ಯಕ್ತಿಗೆ ಮಾರಾಟ ಮಾಡುವ ಪ್ರವರ್ಗದಡಿ ಹಂಚಿಕೆಯಾಗುವ ಆದೇಶಗಳಲ್ಲಿ ಯೋಜನಾ ಅಭಿವೃದ್ಧಿದಾರರು ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತಕ್ಕೆ ಸೌರ ನೀತಿ 2014–21 ರ ಪ್ರಕಾರ ಅನ್ವಯವಾಗುವ ಸಂಸ್ಕರಣಾ ಶುಲ್ಕವನ್ನು ಹಂಚಿಕೆ ಆದೇಶದ ದಿನಾಂಕದಿಂದ 15 ದಿನಗಳೊಳಗೆ ಪಾವತಿಸಬೇಕೆಂದು ಹಾಗೂ 45 ದಿನಗಳೊಳಗೆ ಬ್ಯಾಂಕ್ ಖಾತರಿಯನ್ನು ಸಲ್ಲಿಸಬೇಕೆಂದು, ಇಲ್ಲವಾದಲ್ಲಿ ಅಂತಹ ಹಂಚಿಕೆಯ ಆದೇಶವು ತಂತಾನೇ ರದ್ದಾಗುವುದಾಗಿ ಷರತ್ತನ್ನು ಅಳವಡಿಸಲಾಗಿರುತ್ತದೆ.

ಆದರೆ, M/s BVH Hydel Pvt. Ltd., ರವರು ಸದರಿ ಷರತ್ತನ್ನು ಪಾಲಿಸದ ಕಾರಣ ಮೇಲೆ ಓದಲಾದ ಕ್ರಮ ಸಂಖ್ಯೆ (3) ರ ಪತ್ರದ ಮೂಲಕ ಕಲ್ಪಿಸಿರುವ ಅವಕಾಶದನ್ವಯ ಸಂಸ್ಕರಣಾ ಶುಲ್ಕ ಮತ್ತು ನೆರವೇರಿಕೆ ಬ್ಯಾಂಕ್ ಖಾತರಿಯನ್ನು 15 ದಿನಗಳಲ್ಲಿ ಸಲ್ಲಿಸುವಂತೆ, ಇಲ್ಲದಿದ್ದಲ್ಲಿ ಸದರಿ ಸೌರ ವಿದ್ಯುತ್ ಹಂಚಿಕೆಯನ್ನು ರದ್ದುಮಾಡುವುದಾಗಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಜಾರಿಗೊಳಿಸಿದ್ದ ನೋಟೀಸಿಗೆ M/s BVH Hydel Pvt. Ltd., ರವರು ಯಾವುದೇ ಪ್ರತಿಕ್ರಿಯೆ ವ್ಯಕ್ತಪಡಿಸದಿರುವುದರಿಂದ ಮೇಲೆ ಓದಲಾದ ಕ್ರಮ ಸಂಖ್ಯೆ: (1) ರ ಆದೇಶದ ಮೂಲಕ M/s BVH Hydel Pvt. Ltd., ಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಲ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಹಂಚಿಕೆಯಾಗಿರುವ 1 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಘಟಕ

...2)

4.12.18
GM (Tech) KREDL AGM-SG
To update

ಯೋಜನೆಯನ್ನು ರದ್ದುಪಡಿಸಿ ಆದೇಶವನ್ನು ಹೊರಡಿಸುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ (4) ರ ಪತ್ರದ ಮೂಲಕ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಸದರಿ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಎನ್ 594 ಎನ್‌ಸಿಇ 2018,**
**ಬೆಂಗಳೂರು, ದಿನಾಂಕ: 01.12.2018.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, M/s BVH Hydel Pvt. Ltd., ಗೆ ಚಿಕ್ಕಬಳ್ಳಾಪುರ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಲ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ ಕೆಲವು ಷರತ್ತುಗಳಿಗೊಳಪಟ್ಟು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಹಂಚಿಕೆಯಾಗಿರುವ 1 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಉತ್ಪಾದನಾ ಯೋಜನೆಯನ್ನು ತಕ್ಷಣದಿಂದಲೇ ಜಾರಿಗೆ ಬರುವಂತೆ ರದ್ದುಗೊಳಿಸಿ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ವಿ.ಶ್ರೀನಿವಾಸಯ್ಯ)
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ.

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ/ ವಿಕಾಸ ಸೌಧ, ಬೆಂಗಳೂರು-1.
2. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
3. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು.
5. ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ಬೆಂಗಳೂರು-1.
6. ಜಿಲ್ಲಾಧಿಕಾರಿಗಳು, ಚಿಂತಾಮಣಿ ಜಿಲ್ಲೆ, ಚಿಂತಾಮಣಿ.
7. ಉಪ ಅರಣ್ಯ ಸಂರಕ್ಷಣಾಧಿಕಾರಿ, ಚಿಂತಾಮಣಿ ಜಿಲ್ಲೆ, ಚಿಂತಾಮಣಿ.
8. ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
9. M/s BVH Hydel Pvt. Ltd., 48/13, 6th Main Road, Jnanajyothi Nagar, Bangalore-560024.
10. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
11. ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
12. ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಮೆ: ಬಿವಿಹೆಚ್ ಹೈಡಲ್ ಪ್ರೈವೇಟ್ ಲಿಮಿಟೆಡ್ ಇವರಿಗೆ 1.00 ಮೆ.ವ್ಯಾ. ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಗೆ ನಿರಾಕ್ಷೇಪಣೆ ನೀಡುವ ಕುರಿತು.

**ಓದಲಾಗಿದೆ:**
1 ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರ ಪತ್ರ ಸಂಖ್ಯೆ:KRED/07/GC/IPP-BVH/2015/639 ದಿನಾಂಕ: 03.3.2015.
2 ದಿನಾಂಕ: 16.04.2015 ರಂದು ನಡೆದ ಹಂಚಿಕೆ ಸಮಿತಿ ಸಭೆಯ ನಡವಳಿಗಳು.

* * *

ಸಂ. 639
ದಿ. 14/3/16

**ಪ್ರಸ್ತಾವನೆ :-**

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ಪತ್ರದಲ್ಲಿ ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತದ ವ್ಯವಸ್ಥಾಪಕ ನಿರ್ದೇಶಕರು ಮೆ: ಬಿವಿಹೆಚ್ ಹೈಡಲ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಳ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯನ್ನು ಅನುಷ್ಠಾನಗೊಳಿಸಲು ಮತ್ತು ಈ ಯೋಜನೆಯಿಂದ ಉತ್ಪಾದನೆಯಾಗುವ ವಿದ್ಯುತ್‌ನ್ನು ಮೂರನೇ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿ ನೀಡುವಂತೆ ಅಭಿವೃದ್ಧಿದಾರರು ಕ್ರೆಡಲ್ ಸಂಸ್ಥೆಗೆ ಸಲ್ಲಿಸಿರುವ ಪ್ರಸ್ತಾವನೆಯನ್ನು ಸರ್ಕಾರದ ಅಗತ್ಯ ಅನುಮತಿಗಾಗಿ ಶಿಫಾರಸ್ಸು ಮಾಡಿರುತ್ತಾರೆ.

ದಿನಾಂಕ: 16.04.2015 ರಂದು ನಡೆದ ಮೇಲೆ ಓದಲಾದ ಕ್ರಮ ಸಂಖ್ಯೆ (2)ರ ಹಂಚಿಕೆ ಸಮಿತಿ ಸಭೆಯ ನಡವಳಿಯ ಕ್ರಮ ಸಂಖ್ಯೆ II (4) ರಲ್ಲಿ ಮೆ: ಬಿವಿಹೆಚ್ ಹೈಡಲ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಳ್ಯ ಹೋಬಳಿ ಶಿವಗಂಗಾ ಗ್ರಾಮದಲ್ಲಿ 1.00 ಮೆಗಾ ವ್ಯಾಟ್ ಸಾಮರ್ಥ್ಯದ ಸೌರ ವಿದ್ಯುತ್ ಯೋಜನೆಯನ್ನು ಹಂಚಿಕೆ ಮಾಡಲು ಸಮಿತಿಯು ಶಿಫಾರಸ್ಸು ಮಾಡಿರುತ್ತದೆ. ಆದುದರಿಂದ ಈ ಕೆಳಗಿನಂತೆ ಆದೇಶಿಸಲಾಗಿದೆ : –

**ಸರ್ಕಾರಿ ಆದೇಶ ಸಂಖ್ಯೆ : ಇಎನ್ 67 ಎನ್‌ಸಿಇ 2015,**
**ಬೆಂಗಳೂರು, ದಿನಾಂಕ: 08.03.2016.**

ಮೆ: ಬಿವಿಹೆಚ್ ಹೈಡಲ್ ಪ್ರೈವೇಟ್ ಲಿಮಿಟೆಡ್ ರವರಿಗೆ ಚಿತ್ರದುರ್ಗ ಜಿಲ್ಲೆಯ ಹೋಳಲ್ಕೆರೆ ತಾಲ್ಲೂಕಿನ ತಾಳ್ಯ ಹೋಬಳಿಯ ಶಿವಗಂಗಾ ಗ್ರಾಮದಲ್ಲಿ 1.00 ಮೆಗಾ ಸಾಮರ್ಥ್ಯದ ಸೌರ ವಿದ್ಯುತ್ ಘಟಕವನ್ನು ಸ್ಥಾಪಿಸಲು ಈ ಕೆಳಕಂಡ ಷರತ್ತಿಗೊಳಪಟ್ಟು ಸರ್ಕಾರದ **ನಿರಾಕ್ಷೇಪಣೆಯನ್ನು** ನೀಡಲಾಗಿದೆ.

1. ಅಭಿವೃದ್ಧಿದಾರರು ಯೋಜನೆಯ ಅನುಷ್ಠಾನಕ್ಕೆ ಅಗತ್ಯವಿರುವ ಸಂಬಂಧಿಸಿದ ಇಲಾಖೆಗಳ /ಸಂಸ್ಥೆಗಳ ಅನುಮೋದನೆ ಪಡೆದುಕೊಳ್ಳತಕ್ಕದ್ದು;
2. ಮೆ: ಬಿವಿಹೆಚ್ ಹೈಡಲ್ ಪ್ರೈವೇಟ್ ಲಿಮಿಟೆಡ್ ರವರು ಸೌರ ನೀತಿ 2014–21 ರನ್ವಯ ಈ ಬಾಬ್ತು ನಿಗದಿತ ಶುಲ್ಕ ಮತ್ತು ಬ್ಯಾಂಕ್ ಗ್ಯಾರಂಟಿಯನ್ನು ಕೆ.ಆರ್.ಇ.ಡಿ.ಎಲ್.ಗೆ ಪಾವತಿಸತಕ್ಕದ್ದು.
3. ಯೋಜನೆಯಿಂದ ಉತ್ಪತ್ತಿಯಾಗುವ ವಿದ್ಯುತ್ತನ್ನು ಕೆ.ಇ.ಆರ್.ಸಿ.ಯ ನಿಯಮಗಳನ್ವಯ ಅಭಿವೃದ್ಧಿದಾರರು ಸ್ವಂತಕ್ಕೆ ಬಳಸಿಕೊಳ್ಳಲು ಅಥವಾ ಮೂರನೆಯ ವ್ಯಕ್ತಿಗೆ ಮಾರಾಟ ಮಾಡಲು ಅನುಮತಿಸಿದೆ.

---2)

Acc m (SG)
14/3/16
GM (Tech) KREDL

4. ಈ ಆದೇಶವು ಕೆ.ಇ.ಆರ್.ಸಿ. ಯಿಂದ ಕಾಲ ಕಾಲಕ್ಕೆ ಹೊರಡಿಸಬಹುದಾದ ನೀತಿ ನಿಯಮಗಳಿಗೆ ಒಳಪಟ್ಟಿರುತ್ತದೆ.

ಈ ಆದೇಶವನ್ನು ರದ್ದುಪಡಿಸುವ / ಮಾರ್ಪಾಡು ಮಾಡುವ ಅಧಿಕಾರವನ್ನು ಸರ್ಕಾರವು ಹೊಂದಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಎ.ಚಪ್ಪರಬಂದ್),
ಸರ್ಕಾರದ ಅಧೀನ ಕಾರ್ಯದರ್ಶಿ,
ಇಂಧನ ಇಲಾಖೆ,
☎ 22034674.

**ಇವರಿಗೆ:**
ಸಂಕಲನಕಾರರು, ರಾಜ್ಯಪತ್ರ, ಸರ್ಕಾರಿ ಮುದ್ರಣಾಲಯ, ಬೆಂಗಳೂರು ಇವರಿಗೆ ಪ್ರಕಟಣೆಗಾಗಿ.

**ಪ್ರತಿ:**

1 ಸರ್ಕಾರದ ಪ್ರಧಾನ ಕಾರ್ಯದರ್ಶಿ / ಕಾರ್ಯದರ್ಶಿಗಳು, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ / ಕಂದಾಯ ಇಲಾಖೆ/ ಬಹುಮಹಡಿ ಕಟ್ಟಡ/ ವಿಕಾಸ ಸೌಧ, ಬೆಂಗಳೂರು-1.
2 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ, ಕಾವೇರಿ ಭವನ, ಬೆಂಗಳೂರು-9.
3 ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ನಂ.82, ಶಕ್ತಿ ಭವನ, ರೇಸ್ ಕೋರ್ಸ್ ರಸ್ತೆ, ಬೆಂಗಳೂರು-560 001.
4 ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರ, ಬೆಂಗಳೂರು.
5 ವ್ಯವಸ್ಥಾಪಕ ನಿರ್ದೇಶ್ಕರು, ಕರ್ನಾಟಕ ನವೀಕರಿಸಬಹುದಾದ ಇಂಧನ ಅಭಿವೃದ್ಧಿ ನಿಯಮಿತ, ನಂ.39, 'ಶಾಂತಿಗೃಹ', ಭಾರತ್ ಸ್ಕೌಟ್ಸ್ & ಗೈಡ್ಸ್ ಬಿಲ್ಡಿಂಗ್, ಅರಮನೆರಸ್ತೆ, ಮಹಾರಾಣಿ ಕಾಲೇಜಿನ ಹಿಂಭಾಗ, ಬೆಂಗಳೂರು-1.
6 ವ್ಯವಸ್ಥಾಪಕ ನಿರ್ದೇಶಕರು, ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ, ಬೆಂಗಳೂರು.
7 ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
8 ಉಪ ಅರಣ್ಯ ಸಂರಕ್ಷಣಾಧಿಕಾರಿ ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ.
9 M/s BVH Hydel Private Limited, 48/13, 6th Main Road, Jnanajyothi Nagar, Jnana Bangalore-560 024.
10 ಮಾನ್ಯ ಇಂಧನ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
11 ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಇಂಧನ ಇಲಾಖೆ.
12 ಸರ್ಕಾರದ ಉಪ ಕಾರ್ಯದರ್ಶಿಯವರ ಆಪ್ತ ಸಹಾಯಕರು, ಇಂಧನ ಇಲಾಖೆ.
13 ಶಾಖಾ ರಕ್ಷಾ ಕಡತ / ಕಚೇರಿ ಪ್ರತಿ / ಹೆಚ್ಚುವರಿ ಪ್ರತಿಗಳು.